ಜಯಶ್ರೀ ಭಟ್

# ನೀ ಮಾಯೆಯೊಳಗೋ ನಿನ್ನೊಳು ಮಾಯೆಯೋ ಸೈಬರೇಶ್ವರಾ...

ಮೊದಲೆಲ್ಲ ಬೆಳಗ್ಗೆ ಎದ್ದು ಕಾಫಿ ಬಟ್ಟಲು ಹಿಡಿದು ನ್ಯೂಸ್ ಪೇಪರ್ ನೋಡುತ್ತಾ ಕೂರುವ ಅಭ್ಯಾಸವಿದ್ದ ನಾನೀಗ ಗೋಡೆ ಎದುರು ಸುಮ್ಮನೆ ಕೂರುತ್ತೇನೆ. ಅಯ್ಯೋ ಡಿಪ್ರೆಶನ್ ಆಗಿಲ್ಲಾರಿ, ನಾ ಹೇಳಿದ್ದು ಫೇಸ್‌ಬುಕ್ ಎಂಬ ಗೋಡೆಯನ್ನು. ಈ ಗೋಡೆಯನ್ನು ದಾಟಿ ಪತ್ರಿಕೆ, ಪುಸ್ತಕ ಕೈಗೆತ್ತಿಕೊಳ್ಳುವುದು ಕಷ್ಟಕರವೇ ಆಗಿಬಿಟ್ಟಿದೆ. ದಿನದ ಕೆಲಹೊತ್ತು ನನಗಿಲ್ಲಿನ ವಿದ್ಯಮಾನಗಳನ್ನೆಲ್ಲ ನೋಡದಿದ್ದರೆ ಆಗುವುದೇ ಇಲ್ಲ. ಅದಕ್ಕೆ ಕಾರಣ ನಮ್ಮ ಏರಿಯಾದ ಎಫ್‌ಬಿ ಗ್ರೂಪ್. ಅದೆಷ್ಟು ಮಜವಾಗಿದೆ ಎಂದರೆ ಏಕ್ತಾ ಕಪೂರ್ ಸೀರಿಯಲ್ ಅದರೆದುರು ಮಂಕಾಗಿಹೋಗುವಷ್ಟು.

ಎಕ್ಸ್ ಪ್ಯಾಟ್‌ಗಳೆಂಬ ಮೂರ್ನಾಲ್ಕು ವರ್ಷಕ್ಕೊಮ್ಮೆ ವಿಶ್ವದ ಮಹಾನಗರಿಗಳಲ್ಲಿ ಮನೆ ಬದಲಾಯಿಸುತ್ತಾ ಬದುಕುವ ಸಿರಿವಂತ ವರ್ಗದವರೇ ತುಂಬಿರುವ ಈ ನಮ್ಮ ಏರಿಯಾದಲ್ಲಿ ಸುಮಾರು ಕಾಂಡೋಮಿನಿಯಮ್‌ಗಳೂ ನೂರಾರು ಮನೆಗಳೂ ಇವೆ. ಇವುಗಳ ಮಧ್ಯೆ ಕೊಂಡಿಯಾಗಿ ಬೆಸೆದಿರುವುದು ಫೇಸ್‌ಬುಕ್ ಗ್ರೂಪ್. ಬಹಳ ಬುದ್ಧಿವಂತೆ ಅಡ್ಮಿನ್ ಒಬ್ಬಳು ಇಲ್ಲಿ ಬೇಡದ ಜಾಹೀರಾತು ಬಾರದಂತೆ, ಬೇನಾಮಿ ವ್ಯಕ್ತಿಗಳು ನುಸುಳದಂತೆ ಬಹಳ ಎಚ್ಚರಿಕೆಯಿಂದ ಇದನ್ನು ನಿರ್ವಹಿಸುತ್ತಾ ಬಂದಿದ್ದಾಳೆ. ಇದರಿಂದ ಆಗಿರುವ ಉಪಕಾರ ಹತ್ತು ಹಲವು.

